


# ನಮ್ಮ ಊರಿನ ಸಂತರು

ವ್ಯಕ್ತಿತ್ವಗಳ ಆಗರ. ಬರಿಗಣ್ಣಿಗೆ ಸುಲಭವಾಗಿ ಗೋಚರಿಸದ, ಆದರೆ ಹತ್ತಿರದಿಂದ ಸೂಕ್ಷ್ಮವಾಗಿ ನೋಡಿದರೆ ಸಂತರಂತೆ ಜೀವಿಸುತ್ತಿದ್ದ ಕೆಲವರು ನಮ್ಮ ಊರಿನಲ್ಲಿದ್ದರು. ಇವರು ಮೇಲುನೋಟಕ್ಕೆ ಎಲ್ಲರಂತಿದ್ದರೂ ಅಂತರಂಗದಲ್ಲಿ ಮಾತ್ರ ಲೌಕಿಕದ ಯಾವ ಸಿಕ್ಕುಗಳಿಗೂ ಸಿಲುಕಿಕೊಳ್ಳದೆ, ಶ್ರದ್ಧೆಯಿಂದ ತಾವು ನಂಬಿದ್ದ ಕಾಯಕದಲ್ಲಿ ಮುಳುಗಿರುತ್ತಾ ಅಪ್ಪಟ ಯೋಗಿಗಳಂತೆ ಜೀವಿಸುತ್ತಿದ್ದರು. ಅಂತಹವರಲ್ಲಿ ಪುಟ್ಟಸ್ವಾಮಾಚಾರ್ರು ಒಬ್ಬರು. ಇವರನ್ನು ಕೇರಿಯಲ್ಲಿ ಎಲ್ಲರೂ ಪೂಜಾರಪ್ಪ ಎಂದೇ ಕರೆಯುತ್ತಿದ್ದರು. ಊರಮುಂದಲ ರಂಗನಾಥಸ್ವಾಮಿಗುಡಿ ಪೂಜಾರಿಕೆಯನ್ನು ಮಾಡುತ್ತಿದ್ದರು. ಈ ವೃತ್ತಿಯು ವಂಶಪಾರಂಪರ್ಯವಾಗಿ ಅವರ ಕುಟುಂಬಕ್ಕೆ ಒಲಿದುಬಂದಿತ್ತು.